**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 816 /2021**

**ಪ್ರಾಸಾಃ- 30 ಚಾಸಾಃ- 2**

| | | |
|---|---|---|
| ಸಾಕ್ಷಿಯ ಹೆಸರು | : | ಭರತ್ ಕುಮಾರ್ |
| ತಂದೆಯ ಹೆಸರು | : | ಮಹೇಶ್ ಕುಮಾರ್ |
| ವಯಸ್ಸು | : | 26 ವರ್ಷ |
| ವೃತ್ತಿ | : | ಖಾಸಗಿ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 2.8.2025**
**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 1, 3 ಮತ್ತು 21 ರವರ ಪರಿಚಯ ಇದೆ. ಈಗ ಸುಮಾರು 2 ವರ್ಷದ ಹಿಂದೆ ಪೋಲೀಸರು ಬೆಳಗಲ್ ಕ್ರಾಸ್ ಹತ್ತಿರ ಪಂಚನಾಮೆ ಮಾಡಲು ಕರೆದಿದ್ದರು. ರಾಮಲಕ್ಷ್ಮಿ ಮತ್ತು ಅವಳ ತಾಯಿಯನ್ನು ಸದರಿ ಸ್ಥಳದಿಂದ ಕಾರಿನಲ್ಲಿ ಕರೆದುಕೊಂಡು ಹೋಗಿದ್ದರು ಎಂದು ಗೊತ್ತಾಯಿತು. ಸದರಿ ಸ್ಥಳದಲ್ಲಿ ಪೋಲೀಸರು ನಿಪಿ-5 ರಂತೆ ಪಂಚನಾಮೆಯನ್ನು ಮಾಡಿದ್ದರು. ಸಾಕ್ಷಿಯ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ನಿಪಿ-6 ರಂತೆ ನಕಾಶೆಯನ್ನು ತಯಾರಿಸಿದ್ದರು. ಸಾಕ್ಷಿಯ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ನಿಪಿ-7 ಫೋಟೋವನ್ನು ಸಹ ಪಂಚನಾಮೆ ಸಮಯದಲ್ಲಿ ತೆಗೆದಿದ್ದರು. ಪೋಲೀಸರು ಸದರಿ ಸ್ಥಳವನ್ನು ತೋರಿಸಿದ್ದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನುಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

ದಿಃ 7-6-2021 ರಂದು ಪಂಚನಾಮೆಯನ್ನು ಮಾಡಲಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಚಾಸಾ 21 ಸಹ ಹಾಜರು ಇದ್ದ ಎಂದರೆ ಸರಿ. ಆತ ದಿಃ 20-3-2021 ರಂದು ಮದ್ಯಾಹ್ನ 2-30 ಕ್ಕೆ ಕಾರಿನಲ್ಲಿ ಸದರಿ ಸ್ಥಳದಿಂದ

ರಾಮಲಕ್ಷ್ಮಿ ಮತ್ತು ಅವಳ ತಾಯಿ ಹೋಗಿದ್ದರು ಎಂದು ಹೇಳಿ ಸದರಿ ಸ್ಥಳ ತೋರಿಸಿದ್ದ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ</u>**

ಪೋಲೀಸರು ನನಗೆ ಪಂಚನಾಮೆಗೆ ಬರುವಂತೆ ನೋಟೀಸ್ ನ್ನು ಕೊಟ್ಟಿದ್ದರು. ನನಗೆ ಚಾಸಾ 1, 3 ರವರ ಪರಿಚಯ ಇದೆ. ಚಾಸಾ 1 ನನಗೆ ಸಂಬಂಧಿಕಳು ಎಂದರೆ ಸರಿಯಲ್ಲ. ನನಗೆ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಪೋಲಿಸೀರು ನನ್ನನ್ನು ನೋಟೀಸ್ ಕೊಟ್ಟು ಕರೆದುಕೊಂಡು ಹೋಗಿ ಸಹಿ ಪಡೆದುಕೊಂಡಿದ್ದರು. ನನ್ನ ಸಮಕ್ಷಮ ಮಹಜರು ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 816 /2021</u>**

**ಪ್ರಾಸಾಃ- 31 ಚಾಸಾಃ- 3**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಶಾಂತ್ ಕುಮಾರ್.ಹೆಚ್ |
| ತಂದೆಯ ಹೆಸರು | : | ಮಹೇಶ್ ಕುಮಾರ್.ಹೆಚ್ |
| ವಯಸ್ಸು | : | 26 ವರ್ಷ |
| ವೃತ್ತಿ | : | ಖಾಸಗಿ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 2.8.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 1, 2, 14 ಮತ್ತು 21 ರವರ ಪರಿಚಯ ಇದೆ. ಈಗ ಸುಮಾರು 2 ವರ್ಷದ ಹಿಂದೆ ಪೋಲೀಸರು ಬೆಳಗಲ್ ಕ್ರಾಸ್ ಹತ್ತಿರ ಮತ್ತು ಪೋಲೀಸ್ ಠಾಣೆಯಲ್ಲಿ ಪಂಚನಾಮೆ ಮಾಡಲು ಕರೆದಿದ್ದರು. ಬೆಳಗಲ್ ಕ್ರಾಸ್ ಹತ್ತಿರ ರಾಮಲಕ್ಷ್ಮಿ ಮತ್ತು ಅವಳ ತಾಯಿಯನ್ನು ಸದರಿ ಸ್ಥಳದಿಂದ ಕಾರಿನಲ್ಲಿ ಕರೆದುಕೊಂಡು ಹೋಗಿದ್ದರು ಎಂದು ಗೊತ್ತಾಯಿತು. ಸದರಿ ಸ್ಥಳದಲ್ಲಿ ಪೋಲೀಸರು ನಿಪಿ-5 ರಂತೆ ಪಂಚನಾಮೆಯನ್ನು ಮಾಡಿದ್ದರು. ಸಾಕ್ಷಿಯ ಸಹಿಯನ್ನು ನಿಪಿ-5(ಡಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ನಿಪಿ-6 ರಂತೆ ನಕಾಶೆಯನ್ನು ತಯಾರಿಸಿದ್ದರು. ಸಾಕ್ಷಿಯ ಸಹಿಯನ್ನು ನಿಪಿ-6(ಡಿ) ಎಂದು ಗುರುತಿಸಲಾಯಿತು. ನಿಪಿ-7 ಪೋಟೋವನ್ನೂ ಸಹ ಪಂಚನಾಮೆ ಸಮಯದಲ್ಲಿ ತೆಗೆದಿದ್ದರು. ಪೋಲೀಸರು ಸದರಿ ಸ್ಥಳವನ್ನು ತೋರಿಸಿದ್ದರು.

2021 ರಲ್ಲಿ ಒಂದು ದಿವಸ ಪೋಲೀಸರು ಠಾಣೆಯಲ್ಲಿ ನನ್ನನ್ನು ಕರೆಸಿ 4 ಮೊಬೈಲ್‌ಗಳನ್ನು ತೋರಿಸಿ ಅವುಗಳನ್ನು ಪಂಚನಾಮೆ ಮಾಡಿ ಜಪ್ತು ಮಾಡಿಕೊಂಡಿದ್ದರು. ಸದರಿ ಪಂಚನಾಮೆ ನೋಡುತ್ತಿದ್ದು ಅದನ್ನು ನಿಪಿ-105 ಎಂದು

ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-105(ಎ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ನಿಪಿ-106 ರಂತೆ ಫೋಟೋವನ್ನು ಸಹ ಪೋಲೀಸರು ತೆಗೆದಿದ್ದರು. ನಾನು ಸದರಿ ಮೊಬೈಲ್‌ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು 4 ಮೊಬೈಲ್‌ಗಳನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ಅವುಗಳಲ್ಲಿ ಮೂರು ಮೊಬೈಲ್‌ಗಳನ್ನು ಮು ಮಾ 2, 3 ಮತ್ತು 6 ಎಂದು ಈಗಾಗಲೇ ಗುರುತಿಸಲಾಗಿದೆ. ಇನ್ನೊಂದು ಗ್ರೀನ್ ಕಲರ್ ರೆಡ್ ಮೀ ಮೊಬೈಲ್ ನ್ನು ಮು ಮಾ 7 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನುಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

ದಿಃ 7-6-2021 ರಂದು ಪಂಚನಾಮೆಯನ್ನು ಮಾಡಲಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಚಾಸಾ 21 ಸಹ ಹಾಜರು ಇದ್ದ ಎಂದರೆ ಸರಿ. ಆತ ದಿಃ 20-3-2021 ರಂದು ಮದ್ಯಾಹ್ನ 2-30 ಕ್ಕೆ ಕಾರಿನಲ್ಲಿ ಸದರಿ ಸ್ಥಳದಿಂದ ರಾಮಲಕ್ಷ್ಮಿ ಮತ್ತು ಅವಳ ತಾಯಿ ಹೋಗಿದ್ದರು ಎಂದು ಹೇಳಿ ಸದರಿ ಸ್ಥಳ ತೋರಿಸಿದ್ದ ಎಂದರೆ ಸರಿ. ಆರೋಪಿ 1 ಅವರನ್ನು ಕಾರಿನಲ್ಲಿ ಹತ್ತಿಸಿದ್ದ ಎಂದು ಗೊತ್ತಾಯಿತು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ</u>**

ಪೋಲೀಸರು ನನಗೆ ಪಂಚನಾಮೆಗೆ ಬರುವಂತೆ ನೋಟೀಸ್‌ನ್ನು ಕೊಟ್ಟಿದ್ದರು. ನನ್ನನ್ನು ಸ್ಥಳಕ್ಕೆ ಯಾವ ಉದ್ದೇಶಕ್ಕಾಗಿ ಕರೆದಿದ್ದರು ಎಂದು ನನಗೆ ಮಾಹಿತಿ ಇರಲಿಲ್ಲ. ನಾನು ಹೋಗಿದ್ದ ಸ್ಥಳದಲ್ಲಿ ಯಾವ ಘಟನೆ ನಡೆದಿತ್ತು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಪಂಚನಾಮೆ ಮಾಡಿದ್ದರು ಎಂದು ಹೇಳಿದ ಸಮಯದಲ್ಲಿ ಕರೋನಾ ವ್ಯಾದಿ ಇತ್ತು ಎಂದರೆ ಸರಿ. ಫೋನ್ ಗಳನ್ನು ಠಾಣೆಯಲ್ಲಿ ಪೋಲೀಸರು ತೋರಿಸಿ ಇಟ್ಟುಕೊಂಡಿದ್ದರು. ನನಗೆ ಪ್ರಕರಣದ ಬಗ್ಗೆ ಯಾವುದೇ

ಮಾಹಿತಿ ಇಲ್ಲ ಎಂದರೆ ಸರಿ. ನಾನು ಪೋಲೀಸರು ಹೇಳಿದಂತೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಪೋಲೀಸರು ಹೇಳಿದಂತೆ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಮೊಬೈಲ್ ಗಳನ್ನು ಮಹಜರು ಮಾಡಿ ಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**